ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಸಿ.ಜೆ.ಎಂ., ನ್ಯಾಯಾಲಯ, ಉಡುಪಿ.

ಸಿ.ಸಿಃ 758/2024
ಚಾ. ಸಾ 04
ಪ್ರಾ.ಸಾ 05

| | | |
|---|---|---|
| ಸಾಕ್ಷಿದಾರರ ಹೆಸರು | : | ವಿನೋದಾ |
| ಗಂಡ ಯ ಹೆಸರು | : | ನವೀನ್ |
| ವಯಸ್ಸು | : | 40 |
| ಉದ್ಯೋಗ | : | ಅಂಗಡಿವಾಡಿ ಕಾರ್ಯಕರ್ತ |
| ವಾಸಸ್ಥಳ | : | ಕೊಡವೂರು |

ದಿನಾಂಕಃ 22-04-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಹಿರಿಯ ಸಹಾಯಕ ಅಭಿಯೋಜಕರಿಂದಃ**

ಚಾಸಾ 1 ಮತ್ತು 3 ನನ್ನ ಸಹೋದರರು . ಚಾಸಾ 2 ನನ್ನ ಮಾವ . ಆರೋಪಿತರ ಪರಿಚಯ ಇದೆ . ಆರೋಪಿಗಳು ನಮ್ಮ ಮನೆಯ ಹತ್ತಿರದವರು . ದಿ. 02-09-2018 ರಂದು ಸುಮಾರು ಬೆಳಿಗ್ಗೆ 8.30 ರ ಸಮಯದಲ್ಲಿ ನಮ್ಮ ಜಾಗಕ್ಕೆ ನಾವು ಜಾಗಕ್ಕೆ ಬೇಲಿ ಹಾಕಲು ಬಂದಾಗ ಆರೋಪಿತರು ಕತ್ತಿ ಹಿಡಿದು ನನಗೆ, ನನ್ನ ತಮ್ಮಂದಿರಿಗೆ ಮತ್ತು ಮನೆಯವರಿಗೆಲ್ಲರಿಗೆ ಹೊಡೆಯಲು ಬಂದಿದ್ದರು. ಅವಾಚ್ಯ ಶಬ್ದಗಳಿಂದ ಆರೋಪಿತರು ಬೈದಿರುತ್ತಾರೆ. ಆರೋಪಿಗಳು ನಮ್ಮನ್ನು ಕುರಿತು ನಿಮ್ಮನ್ನು ಮನೆಯಲ್ಲಿ ಕುಳಿತುಕೊಳ್ಳಲು ಬಿಡುವುದಿಲ್ಲ ಸಾಯಿಸುವುದಾಗಿ ಹೇಳಿರುತ್ತಾರೆ . ನಂತರ 03-09-2018 ರಂದು ಏನು ಘಟನೆ ಆಯಿತು ಎಂದು ನನಗೆ ಗೊತ್ತಿಲ್ಲ . ಈ ಘಟನೆ ವಿಚಾರವಾಗಿ 04-09-2018 ರಂದು ಪೊಲೀಸರಿಗೆ ನಾನು ಹೇಳಿಕೆ ಕೊಟ್ಟಿರುತ್ತೇನೆ . ನಮ್ಮ ಮೇಲೆ ಹಲ್ಲೆ ಮಾಡಲು ಬಂದ ವ್ಯಕ್ತಿಗಳು ನ್ಯಾಯಾಲಯದ ಮುಂದೆ ಇರುವ ಆರೋಪಿಯಾಗಿರುತ್ತಾರೆ ಮತ್ತೊಬ್ಬ ಆರೋಪಿ ಮೃತ ಪಟ್ಟಿರುತಾರೆ ಎಂದು ಸಾಕ್ಷಿ ತಿಳಿಸಿರುತ್ತಾರೆ .

ಮಾನ್ಯ ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರು ಸಾಕ್ಷಿಯವರನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ

ನೀಡಬೇಕು ಎಂದು  ಕೋರಿದ್ದು, ಅವರ ಮನವಿಯನ್ನು ಅಂಗೀಕರಿಸಿ ಅನುಮತಿ ನೀಡಲಾಗಿದೆ.

**ಪಾಟೀ ಸವಾಲುಃ ಹಿರಿಯ ಸಹಾಯಕ ಅಭಿಯೋಜಕರಿಂದಃ**

ದಿ. 03-09-2018 ರಂದು ಆರೋಪಿಗಳು ಸೇರಿ ನಮ್ಮ ಜಾಗಕ್ಕೆ ಅಕ್ರಮವಾಗಿ ಪ್ರವೇಶ ವಾಡಿ ನಮ್ಮ ಜಾಗದಲ್ಲಿ ಹಾಕಿದ ತಂತಿ ಕಂಭ ತುಂಡಿ ನಮಗೆ ರೂ 300 ನಷ್ಟ ಉಂಟು ಮಾಡಿರುತಾರೆ ಎಂದರೆ ಸರಿ . ಪೊಲೀಸರಿಗೆ ನಾನು ಹೇಳಿಕೆ ಕೊಟ್ಟಾಗ ಈ ವಿಚಾರ ಹೇಳಿರುತ್ತೇನೆ ಎಂದರೆ ಸರಿ .

**ಪಾಟೀ ಸವಾಲುಃ  ಆರೋಪಿ ಪರ  ವಕೀಲರಿಂದಃ**

02-09-2018 ರಂದು ನಾವು ಅರ್ಧ ಭಾಗಕ್ಕೆ ಮಾತ್ರ ಬೇಲಿ ಹಾಕಿದ್ದೇವು . ನಾವು ಸುಮಾರು 10-20 ಕಲ್ಲುಕಂಭವನ್ನು ಆ ದಿನ ನೆಟ್ಟಿದ್ದೆವು . ಕಲ್ಲುಕಂಭ ನೆಡುವ ಜಾಗದಲ್ಲಿ ಮರ ಗಿಡಗಳು ಬೆಳೆದಿದ್ದವು  ಎಂದರೆ ಸರಿ . ಕಲ್ಲು ಕಂಭ ಹಾಕಿದ ನಂತರ ನಾವು ಫೋಟೊಗಳನ್ನು ತೆಗೆದಿರುತ್ತೇವೆ.  ಗಲಾಟೆ ಆದ ನಂತರ ನಾವು ಕಲ್ಲು ಕಂಭ ಹಾಕುವುದನ್ನು ನಿಲ್ಲಿಸಿರುತ್ತೇವೆ . ಗಲಾಟೆ ದಿ. 02-09-2018 ರಂದು ಬೆಳಿಗ್ಗೆ 8.30 ಕ್ಕೆ ಆಗಿರುತ್ತದೆ . ನಾವು 8.30 20 ಕಲ್ಲುಕಂಭಗಳನ್ನು ನೆಟ್ಟಿ ತಂತಿ ಬೇಲಿ ಹಾಕುವಾಗ ಆರೋಪಿಗಳು ಬಂದಿರುತ್ತಾರೆ.  ನಾವು ತಂತಿಬೇಲಿಯ ಹಾಕಿದ ಒಂದು ಭಾಗದಲ್ಲಿ ಇದ್ದೆವು ಆರೋಪಿಗಳು ಮತ್ತೊಂದು ಭಾಗದಲ್ಲಿ ಇದ್ದರು . ನಾವು ನಿಂತಿದ್ದ ಜಾಗದಿಂದ ಆರೋಪಿಗಳು ನಿಂತಿದ್ದ ಜಾಗಕ್ಕೆ ಎಷ್ಟು ಅಡಿ ದೂರ ಇತ್ತು ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಆರೋಪಿಗಳು ಬೇಲಿಯ ಪಕ್ಕದಲ್ಲಿಯೇ ನಿಂತಿದ್ದರು ಎಂದು ತಿಳಿಸಿರುತ್ತಾರೆ . ಆರೋಪಿಗಳು ನಿಂತಿದ್ದ ಜಾಗದ ಫೋಟೊಗಳನ್ನು ಕೂಡ ನಾವು ತೆಗೆದಿದ್ದೇವೆ. ಆ ಫೋಟೊಗಳನ್ನು ನನ್ನ ಮೊಬೈಲಿನಿಂದ ನಾನೇ ತೆಗೆದಿರುತ್ತೇನೆ. ಅದೇ ಫೋಟೊಗಳನ್ನು ನಾನು ಪೊಲೀಸರಿಗೆ ಕೊಟ್ಟಿರುತ್ತೇನೆ . ಆ ಫೋಟೊಗಳನ್ನು ಯಾವ ಸ್ಟುಡಿಯೋದಲ್ಲಿ ಪ್ರಿಂಟ್ ಮಾಡಿಸಿದಿರಿ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ನನ್ನ ತಮ್ಮನಿಗೆ ಮೊಬೈಲ್ ಕೊಟ್ಟೆ ಆತ ಎಲ್ಲಿ ಪ್ರಿಂಟ್ ತೆಗೆದ ಎಂದು ನನಗೆ ಗೊತ್ತಿಲ್ಲ . ಫೋಟೊಗಳನ್ನು ಎಲ್ಲಿ ಪ್ರಿಂಟ್ ಮಾಡಿಸಿದಿಯಾ ನಾನು ನನ್ನ ತಮ್ಮನ ಬಳಿ ನಾನು

ಕೇಳಲಿಲ್ಲ . ನಾವು ಘಟನೆ ಬಗ್ಗೆ 02-09-2018 ರಂದೇ ಪೊಲೀಸರಿಗೆ ನಾನು, ನನ್ನ ಮಾವ ನನ್ನ ತಮ್ಮಂದಿರು ಸೇರಿ ಕೊಟ್ಟಿರುತ್ತೇವೆ . ನಾನು , ನನ್ನ ಮಾವ , ನನ್ನ ತಮ್ಮ ಮಾತನಾಡಿಕೊಂಡು ಪೊಲೀಸ್ ಠಾಣೆಗೆ ದೂರು ಕೊಟ್ಟಿರುತ್ತೇವೆ . ನಾವು ದೂರು ಕೊಟ್ಟ ನಂತರ 02-09-2018 ರಂದು ಪೊಲೀಸರು ಸ್ಥಳಕ್ಕೆ ಬಂದಿರುತ್ತಾರೆ . ಪೊಲೀಸರು 02-09-2018 ರಂದು ಸ್ಥಳಕ್ಕೆ ಬಂದು ಸ್ಥಳ ಬರವಣಿಗೆ ಮಾಡಿರುತ್ತಾರೆ . ಪೊಲೀಸರು ಬಂದಾಗ ಸ್ಥಳದಲ್ಲಿಯೇ 20 ಕಲ್ಲುಗಳು ತಂತಿ ಅಲ್ಲಿಯೇ ಇತ್ತು . ಅದನ್ನು ಪೊಲೀಸರು ತೆಗೆದುಕೊಂಡು ಹೋಗಿಲ್ಲ . ಚಾಸಾ 6 ಮತ್ತು 7 ರವರ ಸಹಿಯನ್ನು ಪೊಲೀಸ್ ಠಾಣೆಯಲ್ಲಿ ಪೊಲೀಸರು ಪಡೆದಿರುತ್ತಾರೆ. ಆ ನಂತರ ನಾನು ಪೊಲೀಸರನ್ನು ಭೇಟಿಯಾಗಿಲ್ಲ .

ಪೊಲೀಸರು ನ್ಯಾಯಾಲಯಕ್ಕೆ ಕೊಟ್ಟ ಫೋಟೊಗಳಲ್ಲಿ ಆರೋಪಿಗಳು ಕಂಭದ ಪಕ್ಕ ನಿಂತಿರುವುದು ಕಂಡುಬಂದಿಲ್ಲ ಎಂದರೆ ಸಾಕ್ಷಿ ನಾವು ಕಲ್ಲುಕಂಭಗಳನ್ನು ಹಾಕಲು ಪ್ರಯತ್ನ ಪಟ್ಟಾಗಲೇ ಆರೋಪಿಗಳು ಬಂದರು ಎಂದು ತಿಳಿಸಿರುತ್ತಾರೆ. ಫೋಟೊಗಳಲ್ಲಿ ನಾನು ಹೇಳಿರುವಂತೆ ಯಾವುದೇ ಕಲ್ಲುಕಂಭಗಳನ್ನು ಹಾಕಿರುವುದು ಕಂಡು ಬಂದಿರುವುದಿಲ್ಲ ಎಂದರೆ ಸರಿ . ಈ ಪ್ರಕರಣಕ್ಕಾಗಿ ನಾನು ಯಾವುದೇ ಫೋಟೊಗಳಲ್ಲಿ ಜೋಡಿಸಿ ಸೃಷ್ಟಿ ಮಾಡಿ ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ . ನಿಪಿ 4 ಫೋಟೊದಲ್ಲಿ ಖಾಲಿ ಜಾಗ ಕಾಣಿಸುತಿದೆ ಎಂದರೆ ಸರಿ . ಸುಮಾರು ವರ್ಷಗಳಿಂದ ನಮ್ಮ ಮತ್ತು ರೋಪಿಗಳ ನಡುವೆ ಸಿವಿಲ್ ವ್ಯಾಜ್ಯ ನಡೆಯುತಿದೆ ಎಂದರೆ ಸರಿ . 20 ಸೆಂಟ್ಸ್ ಜಾಗದಲ್ಲಿ ನಮ್ಮ ಮನೆ ಇಲ್ಲ . 20 ಸೆಂಟ್ಸ್ ಜಾಗಕ್ಕೆ ಸಂಬಂಧಪಟ್ಟಂತೆ ನಮ್ಮ ಮತ್ತು ಆರೋಪಿಗಳ ನಡುವೆ ಸಿವಿಲ್ ನ್ಯಾಯಾಲಯದಲ್ಲಿ ದಾವೆ ವಿಚಾರಣೆಗೆ ಈಗಲೂ ಕೂಡ ಬಾಕಿ ಇದೆ ಎಂದರೆ ಸರಿ . ಬೇಲಿ ಹಾಕಲು ಕೊರ್ಟ್ ಆದೇಶವನ್ನು ಈ ಪ್ರಕರಣದಲ್ಲಿ ಹಾಜರುಪಡಿಸಿಲ್ಲ . ಆ ಜಾಗದಲ್ಲಿ ಎಷ್ಟು ನಷ್ಟವಾಗಿದೆ ಎಂದು ನನಗೆ ಗೊತ್ತಿಲ್ಲ. ನಮ್ಮ ಮತ್ತು ಆರೋಪಿತರಿಗೂ ಯಾವುದೇ ಮನಸ್ತಾಪ ಇಲ್ಲ ಎಂದರೆ ಸರಿ . ಆರೋಪಿಗಳು ನಮಗೆ ಬೈದಿಲ್ಲ ಎಂದರೆ ಸರಿಯಲ್ಲ . ನಾನು ಫೋಟೋ ತೆಗೆಯುವಾಗ ಸ್ಥಳದಲ್ಲಿ 3 ನೇ ಆರೋಪಿ ಕೂಡ ಇದ್ದರು . ಈಗ ನ್ಯಾಯಾಲಯ ದಲ್ಲಿ ಇರುವ ಫೋಟೊದಲ್ಲಿ 3 ನೇ ಆರೋಪಿ ಇಲ್ಲ ಎಂದರೆ ಸರಿ . 3 ನೇ ಆರೋಪಿ ಮದುವೆಯಾಗಿ ಗಂಡ ಮನೆಯಲ್ಲಿ ಇದ್ದರೂ ಕೂಡ ನಾವು ಆಕೆಯನ್ನು ಸುಳ್ಳು ಪ್ರಕರಣದಲ್ಲಿ ಸಿಲುಕಿಸಿದ್ದರಿಂದ ಆಕೆ

ಗಂಡನ ಮನೆಯಲ್ಲಿ ಹಿಂಸೆಗೆ ಒಳಪಟ್ಟ ಆಕೆ ಆತ್ಮಹತ್ಮೆ ಮಾಡಿಕೊಂಡರು ಎಂದರೆ ಸರಿಯಲ್ಲ . ನಾನು ಹೇಳಿದ ದಿನಾಂಕದಂದು ಯಾವುದೇ ಘಟನೆ ನಡೆದಿಲ್ಲ ಎಂದರೆ ಸರಿಯಲ್ಲ. ಯಾವುದೇ ಮುದ್ದೆಮಾಲನ್ನು ಪೊಲೀಸರು ವಶಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ . ನಾನು ಪೊಲೀಸರ ಮುಂದೆ ಯಾವುದೇ ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ . ಆರೋಪಿಗಳು ನಮಗೆ ಹೊಡೆಯಲು ಬಂದಿಲ್ಲ ಮತ್ತು ಅವಾಚ್ಯ ಶಬ್ದಗಳಿಂದ ಬೈದಿಲ್ಲ ಎಂದರೆ ಸರಿಯಲ್ಲ .

**ಮರು ವಿಚಾರಣೆ:** ಇಲ್ಲ.

(ತೆರದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ರೀತ್ಯಾ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ ಎಂದು ಒಪ್ಪಿದರು.

ಪ್ರ.ಹಿ.ಸಿ.ನ್ಯಾ ಮತ್ತು ಸಿ.ಜೆ.ಎಂ
ಉಡುಪಿ.